ದಿನಾಂಕಃ -09-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರ ಶ್ರೀ ಎಂ ಎಸ್ ಎಸ್ ವಕೀಲರಿಂದಃ-

ಯರಗುಂಟೆಯಿಂದ ಶಿರಾ ಪಟ್ಟಣಕ್ಕೆ ಸುಮಾರು 8 ಕಿ.ಮೀ ಅಂತರವಿದೆ. ಅರ್ಜಿ ಸ್ವತ್ತು ಇರುವುದು ರತ್ನಸಂದ್ರ ಗ್ರಾಮದಲ್ಲಿ ಅಂದರೆ ಸರಿ. ಅರ್ಜಿ ಸ್ವತ್ತಿನಲ್ಲಿ ಒಂದೇ ಒಂದು ಗೋಪುರ ನಿರ್ಮಿಸಿರುತ್ತಾರೆ ಅಂದರೆ ಸರಿ. ನಮ್ಮ ಜಮೀನಿನಲ್ಲಿ ಗೋಪುರದ ಒಂದು ಕಾಲು ಮಾತ್ರ ನಿರ್ಮಾಣವಾಗಿರುತ್ತದೆ . ಗೋಪುರದ ಉಳಿದ 3 ಕಾಲುಗಳು ಪಕ್ಕದ ಜಮೀನಿನಲ್ಲಿ ನಿರ್ಮಾಣವಾಗಿರುತ್ತದೆ . ಪರಿಹಾರವಾಗಿ ನನಗೆ ರೂ.1,41,115-00 ಸಂದಾಯವಾಗಿರುತ್ತದೆ. ಅರ್ಜಿ ಜಮೀನು ಮಳೆ ಆಶ್ರಿತ ಜಮೀನು ಅಂದರೆ ಸರಿ. ಈಗಲೂ ಸಹ ನಾವು ಎಲ್ಲಾ ಬೆಳೆಯನ್ನು ಬೆಳೆಯುತ್ತೇವೆ ಅಂದರೆ ಸರಿಯಲ್ಲ .ಈ ವರ್ಷವು ಸಹ ನಾನು ಯಾವುದೇ ಬೆಳೆಗಳನ್ನು ಹಾಕಿರುವುದಿಲ್ಲ. ಅರ್ಜಿ ಸ್ವತ್ತಿನಲ್ಲಿ ಯಾವುದೇ ಮರ, ಗಿಡಗಳನ್ನು ಕಟ್ಟು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಗೋಪುರ ನಿರ್ಮಾಣ ಮಾಡುವ ಪೂರ್ವದಲ್ಲಿ ಯಾವುದೇ ನೋಟೀಸ್ ನ್ನು ಕೊಟ್ಟಿರುವುದಿಲ್ಲ. ದಿ 30-01-16 ರಲ್ಲಿರುವ ಸಹಿ ನನ್ನದು ಇರುತ್ತದೆ . ಮಹಜರ್ ಗೂ ಸಹ ನಾನು ಸಹಿ ಮಾಡಿರುತ್ತೇನೆ. ಎದುರುದಾರರು ಯಾವುದೇ ಮರಗಿಡಗಳನ್ನು ಕಡಿದಿರುವುದಿಲ್ಲ, ಆ ಕುರಿತು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಅರ್ಜಿಯ ಸ್ವತ್ತಿನಲ್ಲಿ ಮರ, ಗಿಡ ಇದ್ದ ಬಗ್ಗೆ ಯಾವುದೇ ಪೋಟೋ ಹಾಜರುಪಡಿಸಿರುವುದಿಲ್ಲ. ಸಂಬಂದಪಟ್ಟ ಇಲಾಖೆಯಿಂದ ಯಾವುದೇ ದಾಖಲಾತಿ ತಂದು ಹಾಜರುಪಡಿಸಿರುವುದಿಲ್ಲ. ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ನ್ಯಾಯಯುತ ಪರಿಹಾರ ಹಣವನ್ನು ಕೊಟ್ಟಿದ್ದೆ ಅಂದರೆ ಸರಿಯಲ್ಲ.

– ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

6 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.